ಮುಂಜಾನೆ ಮಾತು
ಆಸೆ ಮತ್ತು ಅವಶ್ಯಕತೆಗಳ ನಿಜ ಅರ್ಥವನ್ನು ಗ್ರಹಿಸಿಕೊಂಡು ವ್ಯವಹರಿಸಿದರೆ ದುಃಖಕ್ಕೆ ಅವಕಾಶ ಇರುವುದಿಲ್ಲ. ಆಸೆಗಳನ್ನು ನಿಯಂತ್ರಿಸಿಕೊಂಡು ಅವಶ್ಯಕತೆಗಳನ್ನು ಪೂರೈಸಿಕೊಳ್ಳೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1* ಕನ್ನಡ ದಿನಪತ್ರಿಕೆ
CENTRAL LIBRARY
ಸದ್ದಿಲ್ಲದ ಶಾಲೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 127
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 5 ಆಗಸ್ಟ್ 2018 | ಭಾನುವಾರ

# ಕೃತಿಚೌರ್ಯಕ್ಕೆ ಕಡಿವಾಣ!

## ಸಂಶೋಧನಾ ಗುಣಮಟ್ಟಕ್ಕೆ ಅಧಿಸೂಚನೆ ಪ್ರಕಟ

**ನವದೆಹಲಿ:** ಉನ್ನತ ಶಿಕ್ಷಣದ ಸಂಶೋಧನೆಯಲ್ಲಿ ಕೃತಿಚೌರ್ಯ ನಿಯಂತ್ರಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ಕಠಿಣ ಕ್ರಮಕ್ಕೆ ಮುಂದಾಗಿದ್ದು, ನೋಂದಣಿ ರದ್ದು, ವೇತನ ಬಡ್ತಿ ಕಡಿತ ಮಾಡುವುದಾಗಿ ಅಧಿಸೂಚನೆ ಹೊರಡಿಸಿದೆ.

ಭಾರತೀಯ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನಾ ಗುಣಮಟ್ಟದ ಬಗ್ಗೆ ನಕಾರಾತ್ಮಕ ಚರ್ಚೆಗಳು ನಡೆಯುತ್ತಿರುವ ಕಾರಣ ಯುಜಿಸಿ ಈ ಕ್ರಮ ತೆಗೆದು ಕೊಂಡಿದೆ. ಆಗಸ್ಟ್ 3ರಿಂದಲೇ ಈ ಅಧಿಸೂಚನೆ ಜಾರಿಗೆ ಬರಲಿದೆ. ಮಾರ್ಚ್ 20ರಂದು ನಡೆದ ಯುಜಿಸಿ ಸಭೆಯಲ್ಲಿ ಈ ಸಂಬಂಧದ ನಿರ್ಣಯಕ್ಕೆ ಒಪ್ಪಿಗೆ ನೀಡಲಾಗಿತ್ತು.

ಯುಜಿಸಿ ರೂಪಿಸಿರುವ ನೂತನ ತಂತ್ರಾಂಶದ ಮೂಲಕ ಸಂಶೋಧನಾ ಪ್ರಬಂಧಗಳ ಕೃತಿಚೌರ್ಯದ ಪ್ರಮಾಣವನ್ನು ಗುರುತಿಸಲಾಗುತ್ತದೆ. ಹೀಗಾಗಿ ಯಾವುದೇ ಸಂಶೋಧನಾ ವಿದ್ಯಾರ್ಥಿಗಳು ಕೃತಿಚೌರ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಈ ಹಿಂದೆ ಕೃತಿಚೌರ್ಯ ಮಾಡಿ ಉನ್ನತ ಹುದ್ದೆಯಲ್ಲಿರುವವರಿಗೆ ಇದು ಅನ್ವಯವಾಗುವುದಿಲ್ಲ.

ನಿಯಮ ಪ್ರಕಾರ, ಕೃತಿಚೌರ್ಯದಲ್ಲಿ ತೊಡಗಿರುವ ಸಂಶೋಧನಾ ವಿದ್ಯಾರ್ಥಿಗಳ ನೋಂದಣಿ ರದ್ದಾಗುತ್ತದೆ. ಅದೇ ಈಗಾಗಲೇ ಉದ್ಯೋಗದಲ್ಲಿರುವ ಉಪನ್ಯಾಸಕರು ಕೃತಿಚೌರ್ಯ ಮಾಡಿದರೆ 2 ವರ್ಷದವರೆಗೆ ವೇತನ ಬಡ್ತಿ ಹಾಗೂ 3 ವರ್ಷಗಳವರೆಗೆ ಸಂಶೋಧನಾ ಪದವಿಗಳ ಮೇಲ್ವಿಚಾರಕ ಜವಾಬ್ದಾರಿ ಕಳೆದುಕೊಳ್ಳಲಿದ್ದಾರೆ. ಕೃತಿಚೌರ್ಯಕ್ಕೆ ಮಾನದಂಡ ಇರಿಸಲಾಗಿದ್ದು, ಆ ಆಧಾರದ ಮೇಲೆ ಶಿಕ್ಷೆ ನೀಡಲಾಗುತ್ತದೆ. ಕೃತಿಚೌರ್ಯದ ಬಗ್ಗೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮೂರನೇ ವ್ಯಕ್ತಿ ಕೂಡ ದೂರು ನೀಡಲು ಅವಕಾಶ ನೀಡಲಾಗಿದೆ.

**ತರಬೇತಿ ಕಡ್ಡಾಯ:** ಸಂಶೋಧನಾ ಪದವಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸಂಬಂಧ ಪಟ್ಟ ಉನ್ನತ ಶಿಕ್ಷಣ ಸಂಸ್ಥೆಯು ಕಡ್ಡಾಯವಾಗಿ ಕೃತಿಚೌರ್ಯ, ಸಂಶೋಧನೆಯ ಅಂತಾರಾಷ್ಟ್ರೀಯ ಗುಣಮಟ್ಟ, ಮಾರ್ಗ ಸೂಚಿ ಹಾಗೂ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕು.

### ಯುಜಿಸಿಯಿಂದ ವಿಶೇಷ ತಂತ್ರಾಂಶ

ವಿಶೇಷ ತಂತ್ರಾಂಶ ರೂಪಿಸಲಾಗಿದ್ದು, ಇದರಿಂದ ಕೃತಿಚೌರ್ಯವನ್ನು ಕಂಪ್ಯೂಟರ್‌ನಲ್ಲೇ ಪರಿಶೀಲಿಸಬಹುದಾಗಿದೆ. ತಂತ್ರಾಂಶದಲ್ಲಿ ಹೇಳಿರುವಂತೆಯೇ ಮಾಹಿತಿಗಳನ್ನು ವಿದ್ಯಾರ್ಥಿಗಳು ಫೀಡ್ ಮಾಡಬೇಕಾಗುತ್ತದೆ. ಆ ಮಾಹಿತಿ ಆಧರಿಸಿ ಕೃತಿಚೌರ್ಯ ಕಂಡುಹಿಡಿಯಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಉಲ್ಲೇಖಿತ ಹೇಳಿಕೆ, ಕಾನೂನು, ಸಿದ್ಧಾಂತ, ಪ್ರಮೇಯ ಸೇರಿ ಇತರ ಅಧ್ಯಯನಕ್ಕೆ ಸಂಬಂಧಿಸಿದ ಸಾಮಾನ್ಯ ಅಂಶಗಳಿಗೆ ಕೃತಿಚೌರ್ಯದಿಂದ ವಿನಾಯಿತಿ ನೀಡಲಾಗಿದೆ.




### ನಿಯಂತ್ರಣಕ್ಕೆ ಕ್ರಮ

- ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ತಂತ್ರಜ್ಞಾನ ಆಧಾರಿತ ಕೃತಿ ಚೌರ್ಯ ತಡೆ ವ್ಯವಸ್ಥೆ ಜಾರಿ ಮಾಡಬೇಕು.
- ಈ ವ್ಯವಸ್ಥೆಯು ಸಾರ್ವಜನಿಕವಾಗಿ ಎಲ್ಲರಿಗೂ ಲಭ್ಯವಿರಬೇಕು, ಈ ಮೂಲಕ ಯಾವುದೆ ವಿದ್ಯಾರ್ಥಿಯು ಸುಲಭವಾಗಿ ಸಂಶೋಧನಾ ವಿಷಯಗಳ ಬಗ್ಗೆ ಮಾಹಿತಿ ಪಡೆಯಬಹುದು.
- ಪ್ರತಿ ಸಂಶೋಧನಾ ವಿದ್ಯಾರ್ಥಿಯು ಸಂಶೋಧನೆಯ ಮಾಹಿತಿ ಅಪ್ಲೋಡ್ ಮಾಡುವಾಗ ಕೃತಿಚೌರ್ಯ ಮಾಡಿಲ್ಲ ಎನ್ನುವ ಹಿಂಬರಹ ಬರೆದುಕೊಡಬೇಕು.
- ಈ ಹಿಂಬರಹದ ಜತೆಗೆ ಉನ್ನತ ಶಿಕ್ಷಣ ಸಂಸ್ಥೆಯು ಕೃತಿ ಚೌರ್ಯ ನಿಯಂತ್ರಣಕ್ಕೆ ರೂಪಿಸಿರುವ ವ್ಯವಸ್ಥೆಯ ಷರಾ ಅಗತ್ಯ.
- ಪ್ರತಿಯೊಬ್ಬ ಮೇಲ್ವಿಚಾರಕರು ಕೂಡ ಕೃತಿಚೌರ್ಯದ ಕುರಿತು ಸ್ಪಷ್ಟತೆ ಹೊಂದಿರ ಬೇಕು. ಹೀಗಾಗಿ ಅಧೀನದಲ್ಲಿರುವ ಸಂಶೋಧನಾ ವಿದ್ಯಾರ್ಥಿಗಳ ಪ್ರಬಂಧವು ಕೃತಿಚೌರ್ಯ ರಹಿತವಾಗಿದೆ ಎನ್ನುವುದನ್ನು ಖಾತ್ರಿಪಡಿಸ ಬೇಕು.
- ಉನ್ನತ ಶಿಕ್ಷಣ ಸಂಸ್ಥೆಗಳು ಸಂಶೋಧನಾ ಪದವಿಗೆ ಅನುಮತಿ ಕೊಟ್ಟ 1 ತಿಂಗಳೊಳಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲ ಯದ 'ಶೋಧ ಗಂಗಾ' ರಿಪೊಸಿಟರಿಗೆ ಪ್ರಬಂಧದ ಸಾಫ್ಟ್ ಕಾಪಿ ನೀಡಬೇಕು. ಅದನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಬೇಕು.

### ಕೃತಿಚೌರ್ಯದ ಪ್ರಮಾಣ ಹಾಗೂ ಶಿಕ್ಷೆ

| ಪ್ರಮಾಣ(%) | ಶಿಕ್ಷೆ ಯಾರಿಗೆ, ಎಷ್ಟು? | |
|---|---|---|
| | ಸಂಶೋಧನಾ ವಿದ್ಯಾರ್ಥಿಗಳು | ಉದ್ಯೋಗ ನಿರತರು |
| 0-10 | ಯಾವುದೇ ಶಿಕ್ಷೆಯಿಲ್ಲ | ಯಾವುದೇ ಶಿಕ್ಷೆಯಿಲ್ಲ |
| 10-40 | ಪ್ರಬಂಧ ತಿರಸ್ಕರಿಸಿ 6 ತಿಂಗಳೊಳಗೆ ಮರುಸಲ್ಲಿಕೆ | ಪ್ರಬಂಧ ತಿರಸ್ಕರಿಸಿ 6 ತಿಂಗಳೊಳಗೆ ಮರುಸಲ್ಲಿಕೆ |
| 40-60 | 1 ವರ್ಷದವರೆಗೆ ಮರು ಪ್ರಬಂಧ ಸಲ್ಲಿಕೆಗೆ ನಿರ್ಬಂಧ | 1 ವರ್ಷದ ವೇತನ ಬಡ್ತಿ ರದ್ದು, 2 ವರ್ಷದವರೆಗೆ ಮೇಲ್ವಿಚಾರಕ ಜವಾಬ್ದಾರಿಯಿಲ್ಲ |
| 60ಕ್ಕಿಂತ ಹೆಚ್ಚು | ಪದವಿ ನೋಂದಣಿ ರದ್ದು | 2 ವರ್ಷದ ವೇತನ ಬಡ್ತಿ ರದ್ದು, 3 ವರ್ಷದವರೆಗೆ ಮೇಲ್ವಿಚಾರಕ ಜವಾಬ್ದಾರಿಯಿಲ್ಲ |

ವಿ.ಸೂ: ಒಂದೊಮ್ಮೆ ಶೇ.60ಕ್ಕಿಂತ ಹೆಚ್ಚಿನ ಕೃತಿಚೌರ್ಯವು ಎರಡನೇ ಬಾರಿಗೆ ನಡೆದರೆ [illegible]